ದಿನಾಂಕಃ 21-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಹೆಚ್ ಟಿ ವಕೀಲರಿಂದಃ

ನನಗೆ ದಾವಾಸ್ತಿಯ ಜೊತೆಗೆ ನಿಪಿ-1 ರಲ್ಲಿ ಉಲ್ಲೇಖಿತವಾದ ಐಟಂ ನಂ 1 ರ ಸರ್ವೆ ನಂ 52 ಪಿ2 ರ 38 ವರೆ ಗುಂಟೆ ಪೈಕಿ ಉತ್ತರ ಭಾಗದ 19 ವರೆ ಗುಂಟೆ ಮತ್ತು ಚನ್ನೇಶಪುರ ಗ್ರಾಮದ ಖಾತೆ ನಂ 89/116 ರಲ್ಲಿ ಒಟ್ಟು 3 ಅಂಕಣದ ಕರೆಹೆಂಚಿನ ಮನೆಯಲ್ಲಿ ಪೂರ್ವ ಭಾಗದ 2 ಅಂಕಣದ ಮನೆ ನನ್ನ ಭಾಗಕ್ಕೆ ಬಂತು ಎಂದರೆ ಸರಿ. ಅದರಂತೆ ಬಸವರಾಜಪ್ಪ ಮತ್ತು ಗಂಗಮ್ಮನವರ ಹೆಸರಿಗೆ ಸಹ ಸದರಿ ಸರ್ವೆ ನಂಬರು 52 ಪಿ2 ರಲ್ಲಿ 19 ಗುಂಟೆ ಜಮೀನು ಮತ್ತು ಖಾನೆ ಸುಮಾರಿ 89/116 ರಲ್ಲಿ 1 ಅಂಕಣದ ಮನೆ ಬಂದಿದೆ ಎಂದರೆ ಸರಿ. ಸದರಿ ರಾಜಿ ಅರ್ಜಿಯಂತೆ ಸರ್ವೆ ನಂ 52/ಪಿ2 ರ ಆಸ್ತಿ ಮತ್ತು ಖಾತಾ ನಂ 89/116 ರ ಆಸ್ತಿ ಪ್ರಸ್ತುತ ನನ್ನ ಮತ್ತು ನನ್ನ ತಾಯಿ ಮತ್ತು ನನ್ನ ಅಣ್ಣ ಬಸವರಾಜಪ್ಪನವರ ಹೆಸರಿಗೆ ಜಂಟಿ ಖಾತೆ ಇದೆ ಎಂದರೆ ಸರಿ.

ನಾನು ಈ ದಾವೆಯನ್ನು ಸರ್ವೆ ನಂ 19/2 ಕ್ಕಷ್ಟೆ ಸಲ್ಲಿಸಿದ್ದು ಉಳಿದ ನಿಪಿ-1 ರಲ್ಲಿ ಜಂಟಿ ಖಾತೆಯಲ್ಲಿರುವ ನಿಪಿ-1 ರ ಆಸ್ತಿಗಳ ಕುರಿತು ಏಕೆ ದಾವೆ ಹೂಡಿಲ್ಲ ಎಂದರೆ ಸಾಕ್ಷಿ ನಾನು ಪ್ರತಿವಾದಿಗಳಿಗೆ ಕೊಡಬೇಕಾದ ಆಸ್ತಿಯನ್ನೆಲ್ಲ ಕೊಟ್ಟಿರುವ ಕಾರಣ ಉಳಿದ ಆಸ್ತಿಗಾಗಿ ಮಾತ್ರ ಈ ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿ ಪ್ರತಿವಾದಿಗಳ ಸ್ವತಃ ಆಸ್ತಿಯಾದ ಕಾರಣ ನಾನು ಸ್ವಂತ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ. ಸದರಿ ದಾವಾಸ್ತಿಯನ್ನು ಹೊರತುಪಡಿಸಿ ಬೇರೆ ಮೇಲೆ ಹೇಳಿದ 2 ಆಸ್ತಿಗಳ ಕುರಿತು ಪರಿಹಾರ ಕೋರಿ ನಾನು ದಾವೆ ಸಲ್ಲಿಸಿಲ್ಲ ಎಂದರೆ ಸರಿ. ದಾವಾಸ್ತಿ 1 ನೇ ಪ್ರತಿವಾದಿಯ ಗಂಡನಾದ ಬಸವರಾಜಪ್ಪನ ಕ್ರಯಕ್ಕೆ ಕೊಂಡ ಆಸ್ತಿ ಎಂದರೆ ಸಾಕ್ಷಿ ಸದರಿ ದಾವಾಸ್ತಿ ಪಿತ್ರಾರ್ಜಿತ ಅಸ್ತಿ ಎಂದು ನುಡಿಯುತ್ತಾರೆ. ನನ್ನ ಅಕ್ಕನಾದ ರತ್ನಮ್ಮ ಎನ್ನುವವರು ನಿಪಿ-15 ರಂತೆ ಪಾಲುವಿಭಾಗಕ್ಕಾಗಿ ಹೂಡಿದ ದಾವೆ ವಜಾ ಆಗಿದೆ ಎಂದರೆ ಸರಿ. ಸದರಿ ನಿಪಿ-15 ರ ಪುಟ ಸಂಖ್ಯೆ 15 ರಲ್ಲಿ ವಿವಾದಾಂಶ ನಂ 5 ಕ್ಕೆ ಉತ್ತರಿಸುವಾಗ ನ್ಯಾಯಾಲಯ ಅಸಲು ದಾವಾ ನಂ 262/2008 ನ್ನು ಹೂಡಿದ ನಂತರ 14 ವರ್ಷಗಳ ಅವಧಿ ಮೀರಿ ಈ ದಾವೆ ಹೂಡಲಾಗಿದೆ ಎಂದ ವಜಾ ಮಾಡಿರುತ್ತಾರೆ ಎಂದರೆ ಸರಿ. ನಾನು ಈ ದಾವೆಯನ್ನು 14 ವರ್ಷಗಳ ಅವದಿಚಿ ಮೀರಿ ಸಲಿಲಸಿದ್ದೆನೆ ಎಂದರೆ ಸರಿ. ಆದ ಕಾರಣ ದಾವಾಸ್ತಿಗೆ ಸಂಬಂಧಿಸಿದಂತೆ ನಾನು ಯಾವುದೇ ಮಾಲೀಕತ್ವದ ಹಕ್ಕಿಗಾಗಲಿ ಅಥವಾ ಇತರೆಯಾವುದೇ ಪರಿಹರಕ್ಕಾಗಲಿ ಅರ್ಹನಲ್ಲ ಎಂದರೆ ಸರಿಯಲ್ಲ.

ಹಾಗಾಗಿ ನಿಪಿ-1 ರಲ್ಲಿ ಉಲ್ಲೇಖವಿರುವ ಸಶವೆ ನಂ 52/ಪಿ2 ರ ಆಸ್ತಿ ಮತ್ತು ಖಾತೆ ನಂ 89/116 ರ ಆಸ್ತಿ ನನ್ನ ತಂದೆಗೆ ಜಂಟಿಯಾಗಿ ಬಂದ ಕಾರಣ ಪ್ರತಿವಾದಿಗಳಿಗೂ ಸಹ ನನ್ನ ತಂದೆಯ ಮರಣಾ ನಂತರ ಸದರಿ ಅಸ್ತಿಗಳಲ್ಲಿ ಸಮಾನಾದ ಹಿಸ್ಸಾ ಹಕ್ಕು ಇದೆ ಎಂದರೆ ಸರಿ. ನಾನು ದಾವಾಸ್ತಿಗೆ

ಮಾಲೀಕನಾಗಲಿ ಹಕ್ಕುದಾರನಾಗಲಿ ಆಗದೆ ಇದ್ದರು ಸಹ ಪರತಿವಾದಿಗಳಿಗೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ವ್ಯಾಜ್ಯ ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.